ಆ ತುದಿಯಿಂದ ಮಾತನಾಡುತ್ತಿದ್ದ ವ್ಯಕ್ತಿ, 'ಸರ್ ನಮಸ್ಕಾರ. ನಿಮಗೊಂದು ವಿಷಯ ಹೇಳಬೇಕು ಅಂತ ಫೋನ್ ಮಾಡಿದೆ. ಫ್ರೀಯಾಗಿದ್ದರೆ ಹತ್ತು ನಿಮಿಷ ಮಾತಾಡಬಹುದೇ...' ಎಂದ.

ಮಾತಾಡ್ತಿರೋ ವ್ಯಕ್ತಿ ಯಾರು ಅನ್ನೋದು ಪ್ರಭುದೇವರಿಗೆ ಗೊತ್ತಾಗಲಿಲ್ಲ. 'ಸರ್, ನಾನು ಮೃತ್ಯುಂಜಯ' ಅಂದ. ಪ್ರಭುದೇವ ಉತ್ತರಿಸಲಿಲ್ಲ. 'ಸರ್ ನಾನು. ನಿಮ್ಮ ಕಾದಂಬರಿಗಳ ಮೇಲೆ ಡಾಕ್ಟರೇಟ್ ಮಾಡಿದ್ದೆ. ಚಿಂತಾಮಣಿ ಕಾಲೇಜಲ್ಲಿ ಕನ್ನಡ ರೀಡರ್ ಆಗಿದ್ದೀನಿ...' ಎಂದ. ಪ್ರಭುದೇವ ಆಗಲೂ ಸುಮ್ಮನಿದ್ದರು!

'ಮೂರು ದಿನಗಳ ಹಿಂದೆ ನನ್ನ ಟ್ರಾನ್ಸ್‌ಫರ್ ವಿಷಯದಲ್ಲಿ ನಮ್ಮ ಜಿಲ್ಲಾಮಂತ್ರಿಗಳನ್ನು ಭೇಟಿಯಾಗಲು ಹೋಗಿದ್ದೆ. ಭಾಷಾಭಿವೃದ್ಧಿ ಇಲಾಖೆಯಲ್ಲಿ ಕೆಲಸ ಮಾಡೋ ನನ್ನ ಫ್ರೆಂಡೊಬ್ಬರು ಅಲ್ಲಿ ಸಿಕ್ಕಿದ್ದರು. ಅವರು ಹೇಳಿದ ಒಂದೆರಡು ವಿಷಯಗಳನ್ನು ನಿಮಗೆ ಹೇಳಬೇಕು ಅನ್ನಿಸ್ತು. ಅದಕ್ಕೆ ಫೋನ್ ಮಾಡ್ತಿದ್ದೀನಿ. ನಿಮಗೆ ತೊಂದರೆ ಆಗದಿದ್ದರೆ ಹತ್ತು ನಿಮಿಷ ಮಾತಾಡ್ತೀನಿ...' ಎಂದ. ಆಗಲೂ ಪ್ರಭುದೇವ ಸುಮ್ಮನಿದ್ದರು.

'ಸರ್ ನಿಮ್ಮ ವಿರುದ್ಧ ಬೆಂಗಳೂರಲ್ಲಿ ಕೆಲವರು ಅಪಪ್ರಚಾರ ಮಾಡ್ತಿದ್ದಾರೆ! ಭಾಷಣ ಮಾಡೋದಕ್ಕೆ ಐದು ಸಾವಿರ ರುಪಾಯಿ ಕೊಡಬೇಕು ಅಂತ ನೀವು ಡಿಮ್ಯಾಂಡ್ ಮಾಡ್ತೀರಂತೆ! ಕಾರಿನ ಬಾಡಿಗೆ, ಸಂಜೆಯ ಸಿಟ್ಟಿಂಗ್ ಖರ್ಚು ಕೊಡಬೇಕು ಅಂತ ಬಾಯಿಬಿಟ್ಟು ಕೇಳ್ತೀರಂತೆ ಎಂದು ಕೆಲವರು ಹೇಳಿಕೊಂಡು ಓಡಾಡ್ತಿದ್ದಾರೆ!

'ಸಾಹಿತ್ಯಸಿರಿ ಪ್ರಶಸ್ತಿಗೆ ಆಯ್ಕೆ ಸಮಿತಿ ರಚನೆ ಆದಾಗಿನಿಂದ ಇಂಥ ಮಾತುಗಳು ಕೇಳಿ ಬರ್ತಿವೆ! ನಿಮಗೆ ಪ್ರಶಸ್ತಿ ತಪ್ಪಿಸಬೇಕು ಅನ್ನೋ ಪ್ಲಾನು ನಡೀತಿದೆ...' ಎಂದು ಮೃತ್ಯುಂಜಯ ಹೇಳಿದರೂ ಪ್ರಭುದೇವ ಸುಮ್ಮನಿದ್ದರು.

ಸರ್, ಈಗ ನಾನು ಫೋನ್ ಮಾಡಿದ್ದು ಯಾಕೆ ಅಂದ್ರೆ, ಆಯ್ಕೆ ಸಮಿತಿ ಮೂರು ದಿನಗಳ ಹಿಂದೆ ಸರ್ಕಾರಕ್ಕೆ ವರದಿ ಕೊಟ್ಟಿದೆ. ಮೂರು ಹೆಸರುಗಳನ್ನು ಸಮಿತಿ ಶಿಫಾರಸ್ ಮಾಡಿದೆಯಂತೆ. ಅದರಲ್ಲಿ ನಿಮ್ಮ ಹೆಸರು ಮೊದಲನೆಯದು! ಈ ವಿಷಯ ಬಹಳ ಜನಕ್ಕೆ ಗೊತ್ತಿಲ್ಲ. ಪ್ರಶಸ್ತಿಗೆ ಅನೇಕರು ಲಾಬಿ ಮಾಡ್ತಿದ್ದಾರೆ. ಸಿಎಂ ಮನಸ್ಸಲ್ಲಿ ಏನಿದೆಯೋ ಗೊತ್ತಿಲ್ಲ. ಇಲಾಖೆ ಮಂತ್ರಿಗಳು, ಸ್ವಜಾತಿಯ ಲೇಖಕಿಯೊಬ್ಬಳಿಗೆ ಪ್ರಶಸ್ತಿ ಕೊಡಬೇಕು ಎಂದು ಸಮಿತಿ ಸದಸ್ಯರಿಗೆ ಹೇಳಿದ್ದಾರಂತೆ. ಇದನ್ನೆಲ್ಲ ನಿಮಗೆ ಹೇಳಬೇಕು ಅನ್ನಿಸ್ತು. ಅದಕ್ಕೆ ಫೋನ್ ಮಾಡಿದೆ.... ಸರ್, ಇನ್ನೊಂದು ವಿಷಯ, ನಿಮ್ಮ ಮಾನಸಿಕ ಆರೋಗ್ಯ ಸರಿ ಇಲ್ಲ ಅಂತಲೂ ಅಪಪ್ರಚಾರ ಮಾಡ್ತಿದ್ದಾರೆ. ಸಭೆ, ಸಮಾರಂಭಗಳಲ್ಲಿ ನೀವು ಅಸಂಬದ್ಧವಾಗಿ ಮಾತಾಡ್ತೀರಂತೆ!

ಇವತ್ತಿನ ಪತ್ರಿಕೆಯೊಂದರಲ್ಲಿ ಸಾಹಿತ್ಯಸಿರಿ ಪ್ರಶಸ್ತಿಗೆ ಅರುಣಾದಾಸ್ ಅರ್ಹರು ಎಂದು ಓದುಗನೊಬ್ಬ ಬರೆದ ಪತ್ರ ಪ್ರಕಟವಾಗಿದೆ! ಆಯ್ಕೆ ಸಮಿತಿ ರಚನೆ ಆದಾಗಿನಿಂದ ದಿನಕ್ಕೊಂದು ಹೆಸರನ್ನು ತೇಲಿ ಬಿಡ್ತಿದ್ದಾರೆ. ಪ್ರಶಸ್ತಿ ಜತೆ ಹತ್ತು ಲಕ್ಷ ರೂಪಾಯಿ ಕೊಡ್ತಾರಲ್ಲ. ಅದರ ಮೇಲೆ ಅನೇಕರು ಕಣ್ಣಿಟ್ಟಿದ್ದಾರೆ ಎಂದು ಮೃತ್ಯುಂಜಯ ಹೇಳಿದ.

ಅಪಪ್ರಚಾರಗಳನ್ನು ನಿಲ್ಲಿಸೋಕೆ ಏನಾದರೂ ಮಾಡಬೇಕು ಅಂತ ನಾವು ಯೋಚನೆ ಮಾಡ್ತಿದ್ದೀವಿ. ನಿಮ್ಮ ಕಾದಂಬರಿಗಳ ಮೇಲೆ ಒಂದು ಸೆಮಿನಾರ್ ಮಾಡಬೇಕು ಎಂದು ತೀರ್ಮಾನ ಆಗಿದೆ. ಒಂದು ದಿನದ ಕಾರ್ಯಕ್ರಮ. ನೀವು ಒಪ್ಪಿಗೆ ಕೊಟ್ಟರೆ ಮುಂದುವರಿತೀವಿ. ಸಮಾರೋಪಕ್ಕೆ ನೀವು ಬರಬೇಕು. ಅವತ್ತು ನಿಮಗೆ ಸನ್ಮಾನ ಇರುತ್ತೆ ಎಂದ. ಆಗಲೂ ಪ್ರಭುದೇವ ಅವರಿಗೆ ಫೋನ್ ಮಾಡ್ತಿರೋ ವ್ಯಕ್ತಿ ಯಾರು ಅನ್ನೋದು ನೆನಪಾಗಲಿಲ್ಲ. ಅವನು ಮಾತು ನಿಲ್ಲಿಸಿದ ಮೇಲೂ ಫೋನನನ್ನು ಕಿವಿ ಬಳಿ ಇಟ್ಟುಕೊಂಡಿದ್ದರು.

* * *

ಸಂಜೆ ಮನೆಯ ಮುಂದೆ ಕೂತಿದ್ದಾಗ ಮೃತ್ಯುಂಜಯ ನೆನಪಾದ! ಅರೇ, ಅವನು ಈಚೆಗೆ ಫೋನೇ ಮಾಡಿಲ್ಲವಲ್ಲ. ಎರಡು ತಿಂಗಳ ಹಿಂದೆ ಮಾಡಿದ್ದಾಗ ಇಷ್ಟರಲ್ಲೇ ಪ್ರಮೋಷನ್ ಸಿಗುತ್ತೆ ಅಂದಿದ್ದ. ಸಿಗ್ತೋ, ಇಲ್ಲವೋ ಗೊತ್ತಾಗಲಿಲ್ಲ. ಅವನ ಡಾಕ್ಟರೇಟ್ ಥಿಸೀಸ್‌ಗೆ ಪ್ರಕಾಶಕರು ಸಿಕ್ಕರೋ ಇಲ್ಲವೋ? ಸಿಗದಿದ್ದರೆ ಸ್ವಂತ ದುಡ್ಡಲ್ಲಿ ಪ್ರಕಟಿಸ್ತೀನಿ ಅಂದಿದ್ದ. ಪುಸ್ತಕ ಬಂತೋ, ಇಲ್ಲವೋ ವಿಚಾರಿಸಬೇಕು